ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಆದಾಗ್ಯೂ ಮಾರುಕಟ್ಟೆ ಸಮಿತಿಗಳ ಹೆಚ್ಚುವರಿ ಉಳಿತಾಯದ ಹಣದಿಂದ ಗೊತ್ತುಪಡಿಸಬಹುದಾದ ಕೆಲವು ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ 1991ರಲ್ಲಿ ಕೃಷಿ ಉತ್ಪನ್ನ ಮಾರಾಟ (ನಿ) ಕಾಯ್ದೆ 1966ಕ್ಕೆ ತಿದ್ದುಪಡಿ ಮಾಡಲಾಗಿದೆ. ಅದರಂತೆ 1968ರ ಕೃಷಿ ಉತ್ಪನ್ನ ಮಾರಾಟ (ನಿ) ನಿಯಮಾವಳಿಗೆ ಮಾರುಕಟ್ಟೆ ಕ್ಷೇತ್ರದಲ್ಲಿ ಒದಗಿಸಬಹುದಾದ ಮೂಲಭೂತ ಸೌಲಭ್ಯಗಳನ್ನು ಗೊತ್ತುಪಡಿಸಿ ತಿದ್ದುಪಡಿ ಮಾಡಬೇಕಾಗಿದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ದಿನಾಂಕ 18-3-1992 ರಂದು ಲಿಖಿತ ಮೂಲಕ ಉತ್ತರಿಸುವ 17ನೇ ಪಟ್ಟಿಯಲ್ಲಿರುವ 68 ಪ್ರಶ್ನೆಗಳ ಪೈಕಿ 16 ಪ್ರಶ್ನೆಗಳನ್ನು ಹೊರತುಪಡಿಸಿ, ಉಳಿದ 52 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಖಾಸಗಿ ವ್ಯಕ್ತಿಗಳಿಂದ ವಿದ್ಯುಚ್ಛಕ್ತಿ ಉತ್ಪಾದನೆಗೆ ಹಣ ಹೂಡಿಕೆ ಮಾಡುವ ಬಗ್ಗೆ.

1265. ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಅಭಾವವನ್ನು ನೀಗಿಸಲು ಸರ್ಕಾರದವರು ಖಾಸಗಿಯವರೊಡನೆ ಕರಾರು ಮಾಡಿಕೊಂಡು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಆಲೋಚಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಅಂತಹ ಖಾಸಗೀ ವ್ಯಕ್ತಿಗಳು ಎಷ್ಟು ಮಂದಿ ಮುಂದೆ ಬಂದಿದ್ದಾರೆ ?

ಇ) ಅವರುಗಳು ಹೂಡಲಿಚ್ಛಿಸಿರುವ ಹಣದ ಮೊತ್ತವೆಷ್ಟು (ಅದರ ಹೆಸರುಗಳೇನು)?

ಈ) ಅವರುಗಳ ಪೈಕಿ (ಎಲ್‌ಆರ್‌ಐ) ಪರದೇಶದಲ್ಲಿರುವ ಭಾರತೀಯರೆಷ್ಟು ?

ಉ) ಖಾಸಗಿಯವರು ಹೂಡಬೇಕೆಂದಿರುವ ಹಣದಿಂದ ಅಂದಾಜು ಎಷ್ಟು ಮೆವ್ಯಾಟ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವ ಸಂಭವವಿದೆ ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಹೌದು.

ಆ) ಎಂಟು ಮಂದಿ ಖಾಸಗಿ ವ್ಯಕ್ತಿಗಳು.

ಇ) ಈ ಕೆಳಗಿನ ಸಂಸ್ಥೆಗಳು ಜಲ / ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲು ಉತ್ಸಾಹ ತೋರಿಸಿವೆ.

ಶಾಖೋತ್ಪನ್ನ ಕೇಂದ್ರಗಳು :

1. ಮೆ. ನಾರ್ಡಿಕ್ ಪವರ್ ಇನ್‌ವೆಸ್ಟ್. ಸ್ವೀಡನ್.
2. ಮೆ. ಏಷಿಯ ಪಾಂಶೋಶನ್ ಆಂಡ್ ಕನ್‌ಸ್ಟ್ರಕ್ಷನ್ ಲಿಮಿಟೆಡ್, ಬಾಂಬೆ-25.
3. ಮೆ. ಎಲ್.ಕೆ. ಪವರ್ ಕಾರ್ಪೋರೇಷನ್. ಬೆಂಗಳೂರು-62

ಜಲವಿದ್ಯುತ್ ಕೇಂದ್ರಗಳು :

1. ಮೆ. ದಾಂಡೇಲಿ ಸ್ಟೀಲ್ ಅಂಡ್ ಫೆರ್ರೋ ಅಲ್ಲಾಯಸ್ ಲಿಮಿಟೆಡ್. ದಾಂಡೇಲಿ.
2. ಮೆ. ರುಕ್ಮಣಿ ಸ್ಟೀಲ್ ಇಂಡಸ್ಟ್ರೀಸ್ ಲಿಮಿಟೆಡ್, ಬೆಂಗಳೂರು-2
3. ಮೆ. ಕೆನರಾ ಸ್ಟೀಲ್ಸ್ ಲಿಮಿಟೆಡ್, (ಮೆ. ಮಣಿಪಾಲ್ ಪವರ್ ಕಾರ್ಪೋರೇಷನ್ ಲಿಮಿಟೆಡ್), ಮಣಿಪಾಲ್-576119.
4. ಮೆ. ಬರೂಕ ಪವರ್ ಕಾರ್ಪೊರೇಷನ್ ಲಿಮಿಟೆಡ್, ಬೆಂಗಳೂರು-1.
5. ಮೆ. ಗ್ರಾಫೈಟ್ ಇಂಡಿಯ ಲಿಮಿಟೆಡ್. ಕಲ್ಕತ್ತ.

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿಯವರು ಸರಬರಾಜು (ಉಪಕರಣ) ರಚನೆ ಮತ್ತು ಕಮಿಷನಿಂಗ್ (ಚಾಲೂ ಮಾಡುವುದು) ಇದಕ್ಕೆ ಸೀಮಿತವಿದ್ದಂತೆ ಡೀಸೆಲ್ ಘಟಕವನ್ನು ಸ್ಥಾಪಿಸಲು ಉತ್ಸಾಹ ತೋರಿಸಿದ್ದಾರೆ.

ಚರ್ಚೆ ಇನ್ನೂ ನಡೆಯುತ್ತಿದೆ.

ಈ ಯೋಜನೆಗಳನ್ನು ವಹಿಸಿಕೊಟ್ಟ ನಂತರವೇ ಬಂಡವಾಳ ಹೂಡಿಕೆಯ ಪ್ರಮಾಣವನ್ನು ಖಚಿತವಾಗಿ ಹೇಳಲು ಸಾಧ್ಯವಾಗುತ್ತದೆ. ಇದೇ ಸಮಯಕ್ಕೆ 18.5 ಮೆ.ವ್ಯಾಟ್ ಸಾಮರ್ಥ್ಯದ 2 ಸಣ್ಣ ಜಲವಿದ್ಯುತ್ ಕೇಂದ್ರಗಳನ್ನು ಖಾಸಗಿಯವರಿಗೆ ವಹಿಸಿಕೊಟ್ಟಿರುತ್ತದೆ. ಅವುಗಳು :

1) ಮೆ. ಗ್ರಾಫೈಟ್ ಇಂಡಿಯಾ ಲಿಮಿಟೆಡ್ (15 ಮೆ.ವ್ಯಾಟ್)
2) ಮೆ. ರುಕ್ಮಣಿ ಸ್ಟೀಲ್ ಇಂಡಸ್ಟ್ರೀಸ್ (3.5 ಮೆ.ವ್ಯಾಟ್)

ಇವರುಗಳು ಬಂಡವಾಳ ಹೂಡಿಕೆ ಸುಮಾರು 42 ಕೋಟಿ ರೂಪಾಯಿಗಳು.

ಈ) ಇಲ್ಲ.

ಉ) ಯೋಜನೆಗಳನ್ನು ಖಾಸಗಿಯವರಿಗೆ ವಹಿಸಿಕೊಟ್ಟ ನಂತರವೇ ಇದನ್ನು ಗೊತ್ತುಪಡಿಸಬಹುದು.